# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 20/2016

(ಪ್ರಾಸಾ-2 ಚಾಸಾ-2 )
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು
ದಿಃ21.10.2021.

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಜು, |
| ತಂದೆಯ/ಗಂಡನ ಹೆಸರು | - | ಅಯ್ಯವ್ವೋ |
| ವಯಸ್ಸು | - | 61 ವರ್ಷ, |
| ಉದ್ಯೋಗ | - | ಬಂಡೆ ಕೆಲಸ |
| ವಾಸ | - | ಸಂಪಂಗಿರಾಮನಗರ, ಆನೇಕಲ್. |

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ</u>**

ಚಾಸಾ-1 ನನ್ನ ಪತ್ನಿ. ಚಾಸಾ-3 ನನ್ನ ಮಗ. ಚಾಸಾ-4 ನನ್ನ ಸೊಸೆ. ಚಾಸಾ-5, 6 ಪಕ್ಕದ ಮನೆಯವರು. ಚಾಸಾ-7 ರಿಂದ 14 ಗೊತ್ತು. ನಾವು ಪರಿಶಿಷ್ಟ ಜಾತಿಯ ಬೋವಿ ಜಾತಿಗೆ ಸೇರಿದವರು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಗೊತ್ತು. ಆರೋಪಿ ತಿಗಳರ ಜಾತಿಗೆ ಸೇರಿದವರು. ನನಗೆ 32*60 ಅಡಿಯ ಸೈಟ್ ಸರ್ಕಾರದಿಂದ ಮಂಜೂರಾಗಿತ್ತು. ಸದರಿ ಸೈಟ್ ನಲ್ಲಿ ಶೀಟ್ ಮತ್ತು ಮೌಲ್ಡ್ ಮನೆ ಕಟ್ಟಿಕೊಂಡಿದ್ದೇವೆ. ಮೇಲೆ ಒಂದು ರೂಮ್ ಕಟ್ಟಿಸಿದ್ದೇವೆ. ಒಂದು ಮನೆಯಲ್ಲಿ ನಾನು ನನ್ನ ಪತ್ನಿ ಮತ್ತೊಂದು ಮನೆಯಲ್ಲಿ ನನ್ನ ಮಗ ಮತ್ತು ಸೊಸೆ ಮತ್ತೊಂದು ಮನೆಯನ್ನು ಬಾಡಿಗೆ ಕೊಟ್ಟಿದ್ದೇವೆ.

ಈ ಹಂತದಲ್ಲಿ ನ್ಯಾಯಾಲಯದ ಅವಧಿ 2.00 ಗಂಟೆ ಆಗಿದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಂಡು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಮೋಹನ ಬಾಡಗಂಡಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸಾಕ್ಷಿಗೆ ಮಧ್ಯಾಹ್ನದ ಕಾಲಾವಧಿಯಲ್ಲಿ ಪುನಃ ಪ್ರಮಾಣ ವಚನ ಬೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ</u>

2. ಆರೋಪಿ ಹಾಗೂ ನಾನು ಕಲ್ಲು ಬಂಡೆ ಕುರಿತಂತೆ ವ್ಯವಹಾರ ಮಾಡಿದ್ದೆವು ನಾನು ಆರೋಪಿಯಿಂದ ಹತ್ತು ಲಕ್ಷ ಹಣ ಪಡೆದಿದ್ದೆವು. ಸದರಿ ಹಣದಲ್ಲಿ ಆಳುಗಳಿಗೆ ಸ್ವಲ್ಪ ಸ್ವಲ್ಪ ಹಣ ಕೊಟ್ಟಿದ್ದೆನು. 50 ಸಾವಿರ ಹಾಗೂ 1 ಲಕ್ಷಗಳಂತೆ ಕೆಲವು ಬಾರಿ ಹಣ ನೀಡಿದ್ದೆನು. ಉಳಿದ ಹಣವನ್ನು ಆಳುಗಳಿಗೆ ಕೊಟ್ಟಿದ್ದೆನು. ಆಳುಗಳೆಲ್ಲಾ ಕೆಲಸ ಬಿಟ್ಟು ಓಡಿ ಹೋಗಿದ್ದರು.

3. ಆರೋಪಿಯು ನನಗೆ ಕಾಸು ಕೊಡು ಇಲ್ಲ ಬಡ್ಡಿ ಹಣ ಕೊಡು ಎಂದು ಕೇಳಿದ್ದರು. ನಾನು ಸುಮಾರು 25 ತಿಂಗಳು ಬಡ್ಡಿ ಹಣವನ್ನು ಆರೋಪಿಗೆ ಕೊಟ್ಟಿದ್ದೆನು. ನಂತರ ನನ್ನ ಮಗನಿಗೆ ಅಪಘಾತವಾಗಿತ್ತು. ಪುನಃ ಆರೋಪಿ ಬಂದು ನನಗೆ ಬಡ್ಡಿ ಹಣವನ್ನು ಕೇಳಿದ್ದನು ನನಗೆ ಹಣ ಕೊಡಲಾಗಿರಲಿಲ್ಲ. ದುಡ್ಡು ಕೊಡದೇ ಇದ್ದುದರಿಂದ ಆರೋಪಿ ನಮ್ಮ ಮನೆಗೆ ಬಂದು ಗಲಾಟೆ ಮಾಡಿದ್ದನು.

4. ಸದರಿ ಘಟನೆ ಸುಮಾರು 6 ವರ್ಷಗಳ ಹಿಂದೆ 04.00 ರಿಂದ 05.00 ಗಂಟೆ ಸಮಯದಲ್ಲಿ ಆರೋಪಿ ನಮ್ಮ ಮನೆಯ ಬಳಿ ಗಲಾಟೆ ಮಾಡಿದ್ದರು. ಆಗ ನಾನು, ನನ್ನ ಪತ್ನಿ, ನನ್ನ ಮಗ ನನ್ನ ಸೊಸೆ, ನನ್ನ ಮೊಮ್ಮಗ ಇದ್ದೆವು. ಆರೋಪಿ ನನ್ನ ಮಗ ಈಗಾಗಲೇ ಅಪಘಾತದಲ್ಲಿ ಗಾಯಗೊಂಡಿದ್ದವನ ಕಾಲನ್ನು ತಿರುವಿದನು. ಆರೋಪಿ ನನ್ನ ತಲೆಗೆ ಹೊಡೆಯಲು ಬಂದಿದ್ದನು. ನಾನು ಕುಳಿತುಕೊಂಡಿದ್ದೆನು ಆರೋಪಿ ನನಗೆ ಕೋಲಿನಿಂದ ಹೊಡೆದಿದ್ದನು. ನಾನು ಸ್ಟೇಷನ್ ಗೆ ಫೋನ್ ಮಾಡಿದ್ದೆನು. ನನ್ನನ್ನು ಮನೆಯಿಂದ ಹೊರಗೆ ಹಾಕಿ ಬೀಗ ಹಾಕಿದ್ದಾನೆ ಎಂದು ಫೋನ್ ಮಾಡಿದ್ದೆನು. ನಾವು ಮೂರು ದಿನ ದೇವಸ್ಥಾನದಲ್ಲಿ ಕುಳಿತುಕೊಂಡಿದ್ದೆವು. ಪೋಲಿಸರು ಬಂದಿದ್ದರು. ನಾನು ಈ ಬಗ್ಗೆ ಹೇಳಿಕೆ ನೀಡಿದ್ದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ನನಗೆ ಹೊಡೆದಿದ್ದನು.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯ ಕಲಂ161 ರ ಅಡಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು : ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

5. ಆರೋಪಿ ನಮ್ಮ ಮನೆಗೆ ಆಗಾಗ ಬಂದು ಮನೆ ಖಾಲಿ ಮಾಡಿ ಇಲ್ಲ ದುಡ್ಡು ಕೊಡು ಎಂದು ತೊಂದರೆ ಕೊಡುತ್ತಿದ್ದರು ಎಂದರೆ ಸರಿ. ಘಟನೆಯಲ್ಲಿ ಆರೋಪಿ ನಮಗೆ ಏ ವಡ್ಡ ನನ್ನ ಮಕ್ಕಳಾ, ವಡ್ಡನಾ ಪೂಕ ಎಂದು ನಮ್ಮನ್ನು ಜಾತಿ ಹಿಡಿದು ಬೈದು ಮನೆ ಖಾಲಿ ಮಾಡದೇ ಹೋದರೆ ನಿಮ್ಮನ್ನು ನಿಮ್ಮ ವಸ್ತುಗಳನ್ನು ಹೊರಗೆ ಹಾಕುತ್ತೇನೆ ಎಂದು ಬೆದರಿಕೆ ಹಾಕಿದ್ದನು ಎಂದರೆ ಸರಿ. ಆರೋಪಿ ನನಗೆ ಘಟನೆಯ ಸಮಯದಲ್ಲಿ ಕೈಯಿಂದ ಹೊಡೆದಿದ್ದಾನೆ ಎಂದರೆ ಸರಿ. ಗಲಾಟೆಯನ್ನು ಚಾಸಾ-3 ರಿಂದ 6 ರವರು ಕೂಡ ನೋಡಿದ್ದರು ಎಂದರೆ ಸರಿ. ಆರೋಪಿ ಜಾತಿ ದೌರ್ಜನ್ಯ ಮಾಡಿರುವ ಬಗ್ಗೆ ಹೇಳಿಕೆ ನೀಡುವ ಸಮಯದಲ್ಲಿ ಈ ಎಲ್ಲಾ ವಿಚಾರಗಳನ್ನು ಪೋಲಿಸರಿಗೆ ಹೇಳಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿಗಳ ಪರ ವಕೀಲರಿಂದಃ ಶ್ರೀ ಕೆಸಿಟಿ ವಕೀಲರಿಂದಃ**

**6.** ಆರೋಪಿ ಪರ ವಕೀಲರು ಕಲಂ 231(2) ಸಿ ಆರ್ ಪಿ ಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಂಡು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಮೋಹನ ಬಾಡಗಂಡಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು